# ರಗಡ್ ಲುಕ್‌ನಲ್ಲಿ ವಿಜಯ್ ಸೂರ್ಯ



'ಅಗ್ನಿಸಾಕ್ಷಿ' ಧಾರಾವಾಹಿ ಮೂಲಕ ಕಿರುತೆರೆಯಲ್ಲಿ ಮಿಂಚಿದ್ದ ನಟ ವಿಜಯ್ ಸೂರ್ಯ ಇದೀಗ 'ವೀರಪುತ್ರ'ನಾಗಿ ಬೆಳ್ಳಿತೆರೆಗೆ ಮತ್ತೊಮ್ಮೆ ಕಾಲಿಡುತ್ತಿದ್ದಾರೆ. ವೀರಪುತ್ರ ಸಿನಿಮಾದ ಫಸ್ಟ್‌ಲುಕ್ ಈಚೆಗಷ್ಟೇ ಬಿಡುಗಡೆಯಾಗಿದ್ದು, ರಗಡ್ ಲುಕ್‌ನಲ್ಲಿ ವಿಜಯ್ ಕಾಣಿಸಿಕೊಂಡಿದ್ದಾರೆ.

ಕಿರುತೆರೆಯಲ್ಲಿ ಪಳಗಿದ ನಂತರ 'ಇಷ್ಟಕಾಮ್ಯ' ಸಿನಿಮಾ ಮೂಲಕ ವಿಜಯ್ ಸಿನಿಮಾರಂಗ ಪ್ರವೇಶಿಸಿದ್ದರು. ಮತ್ತೆ ಧಾರಾವಾಹಿಯತ್ತ ಹೊರಳಿದ್ದ ಅವರು ಪ್ರಸ್ತುತ 'ಪ್ರೇಮಲೋಕ' ಎಂಬ ಧಾರಾವಾಹಿಯಲ್ಲಿ ನಟಿಸುತ್ತಿದ್ದಾರೆ. ಈಗ ರಫ್ ಅಂಡ್ ಟಫ್ ಪಾತ್ರವನ್ನಿಟ್ಟುಕೊಂಡು ಸಿನಿಮಾಗೆ ಕಾಲಿಟ್ಟಿದ್ದಾರೆ.

ಈ ಹೊಸ ಸಿನಿಮಾಗೆ ದೇವರಾಜ್ ಎಸ್. ಆ್ಯಕ್ಷನ್ ಕಟ್ ಹೇಳುತ್ತಿದ್ದು, ಇದು ಇವರ ನಿರ್ದೇಶನದ ಎರಡನೇ ಚಿತ್ರ. ಈ ಹಿಂದೆ 'ಸಪ್ಲಿಮೆಂಟರಿ' ಎಂಬ ಚಿತ್ರವನ್ನು ನಿರ್ದೇಶಿಸಿದ್ದ ಅವರು, ಮೆಡಿಕಲ್ ಮಾಫಿಯಾ ಹಾಗೂ ಪ್ರತೀಕಾರದ ಕಥಾಹಂದರ ಹೊಂದಿರುವ 'ವೀರಪುತ್ರ' ಸಿನಿಮಾ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ. ಜೊತೆಗೆ ಕಥೆ, ಚಿತ್ರಕಥೆ, ಸಂಭಾಷಣೆಯನ್ನೂ ಬರೆದಿದ್ದಾರೆ.

ವಿಜಯ್ ಸೂರ್ಯ ಅವರಿಗೆ ಜೋಡಿಯಾಗಿ ಲೇಖಚಂದ್ರ ನಟಿಸುತ್ತಿದ್ದು, ಉಮಾಶ್ರೀ ಮುಖ್ಯಭೂಮಿಕೆಯಲ್ಲಿದ್ದಾರೆ. ಬೆಂಗಳೂರು, ಹೈದರಾಬಾದ್‌ನಲ್ಲಿ ಶೇ.60ರಷ್ಟು ಚಿತ್ರೀಕರಣ ನಡೆಸಲಾಗಿದೆ. ■

# ಹಾಸ್ಯದೌತಣ ನೀಡಲು ರೆಡಿ



ನಟ ರಮೇಶ್ ಅರವಿಂದ್ ಹಾಗೂ ಗೋಲ್ಡನ್ ಸ್ಟಾರ್ ಗಣೇಶ್ ಒಟ್ಟಿಗೆ ನಟಿಸಲು ಅಣಿಯಾಗಿದ್ದಾರೆ. ವಿಖ್ಯಾತ್ ನಿರ್ದೇಶನದ ಹೊಸ ಸಿನಿಮಾದಲ್ಲಿ ಈ ಇಬ್ಬರು ನಟರೂ ಜೊತೆಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

ಇದೇ ಸಂದರ್ಭ, ಬಹುತಾರಾಗಣದ ಸಿನಿಮಾ ಕುರಿತು ರಮೇಶ್ ಮಾತನಾಡಿದ್ದಾರೆ. 'ಬಹುತಾರಾಗಣದ ಸಿನಿಮಾದಲ್ಲಿ ಎಲ್ಲಾ ನಟರ ಪಾತ್ರಗಳಿಗೂ ಪ್ರಾಮುಖ್ಯ ಇರಲೇಬೇಕೆಂಬುದು ನನ್ನ ಅಭಿಪ್ರಾಯ ಹಾಗೂ ಸಿನಿಮಾದಲ್ಲಿ ಸಮತೋಲನ ಕಾಯ್ದುಕೊಳ್ಳುವಂಥ ನಟರ ಕಾಂಬಿನೇಷನ್ ಕೂಡ ಅಷ್ಟೇ ಮುಖ್ಯ. ಬಹುತಾರಾಗಣದ ಸಿನಿಮಾದಲ್ಲಿ ಪ್ರತಿ ನಟನ ಪಾತ್ರವೂ ಸಮರ್ಥನೀಯವಾಗಿರಬೇಕು. ಇದುವರೆಗೆ ನನಗೆ ದೊರೆತಿರುವ ಸಿನಿಮಾಗಳು ಹಾಗಿದ್ದವು ಕೂಡ' ಎಂದು ಹೇಳಿದ್ದಾರೆ.

ಬಹುತಾರಾಗಣದ ಸುಮಾರು 25 ಸಿನಿಮಾಗಳಲ್ಲಿ ನಟಿಸಿರುವ ಖ್ಯಾತಿ ರಮೇಶ್ ಅವರದ್ದು. ಕಮಲ್ ಹಾಸನ್, ಶಿವರಾಜ್ ಕುಮಾರ್, ವಿಷ್ಣುವರ್ಧನ್, ರಾಮ್ ಕುಮಾರ್ ಸೇರಿದಂತೆ ಹಲವು ನಟರೊಂದಿಗೆ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದಾರೆ ರಮೇಶ್. ಆ ಸಿನಿಮಾಗಳು ಬಹುದೊಡ್ಡ ಯಶಸ್ಸನ್ನೂ ತಂದುಕೊಟ್ಟಿವೆ.

ಈಚೆಗಷ್ಟೇ 59ನೇ ವರ್ಷದ ಹುಟ್ಟುಹಬ್ಬ ಆಚರಿಸಿಕೊಂಡಿರುವ ರಮೇಶ್ ಅರವಿಂದ್, ಸದ್ಯ ಎರಡು ಸಿನಿಮಾಗಳಲ್ಲಿ ಬ್ಯುಸಿ ಆಗಿದ್ದಾರೆ. 'ಶಿವಾಜಿ ಸುರತ್ಕಲ್' ಸಿನಿಮಾ ನಿರ್ದೇಶಿಸಿದ್ದ ಆಕಾಶ್ ಶ್ರೀವತ್ಸ ಅವರೊಂದಿಗೆ ರಮೇಶ್, ಹಾರರ್ ಥ್ರಿಲ್ಲರ್ ಕಥಾಹಂದರದ 'ದೈಜಿ' ಸಿನಿಮಾಗೆ ಸಹಿ ಹಾಕಿದ್ದಾರೆ. ಇದರೊಂದಿಗೆ, ವಿಖ್ಯಾತ್




ನಿರ್ದೇಶನದಲ್ಲಿ, ನಟ ಗಣೇಶ್ ಜೊತೆ ಹಾಸ್ಯ ಸಿನಿಮಾದಲ್ಲಿ ನಟಿಸುತ್ತಿದ್ದಾರೆ.

ಈ ಕುರಿತು ಮಾತನಾಡಿರುವ ರಮೇಶ್, 'ಗಣೇಶ್ ಹಾಗೂ ನಾನು ಒಟ್ಟಿಗೆ ನಟಿಸುತ್ತಿದ್ದೇವೆ. ಅವರು ತುಂಬಾ ಒಳ್ಳೆಯ ನಟ. ಈ ಹಿಂದೆ ನನ್ನ ನಿರ್ದೇಶನದ 'ಸುಂದರಾಂಗ ಜಾಣ' ಸಿನಿಮಾದಲ್ಲಿ ನಟಿಸಿದ್ದರು. ನಮ್ಮಿಬ್ಬರ ನಡುವೆ ಒಳ್ಳೆಯ ಒಡನಾಟ ಇದೆ. ಈ ಹಿಂದೆಯೂ ಸಿನಿಮಾವೊಂದರಲ್ಲಿ ಇಬ್ಬರೂ ಒಟ್ಟಿಗೆ ಕೆಲಸ ಮಾಡುವ ಅವಕಾಶ ಒದಗಿಬಂದಿತ್ತು. ಆದರೆ ಕಾರಣಾಂತರಗಳಿಂದ ಅದು ಕಾರ್ಯರೂಪಕ್ಕೆ ಬರಲಿಲ್ಲ. ಈಗ ಈ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದೇವೆ. ಇದು ಹೃದಯಕ್ಕೆ ಹತ್ತಿರವಾಗುವ ಸಿನಿಮಾ' ಎಂದಿದ್ದಾರೆ.

ಸಿನಿಮಾ ಪೋಸ್ಟರ್ ಬಿಡುಗಡೆಯಾಗಿದೆ. ಈ ಎರಡೂ ನಟರ ಅಭಿಮಾನಿಗಳಿಗೆ ಸಿನಿಮಾ ಹಾಸ್ಯರಸದೌತಣ ಉಣಿಸುವ ಸೂಚನೆ ನೀಡಿದೆ. ■